## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 819/2015

ಸಾಕ್ಷಿಗೆ ದಿನಾಂಕ 25-07-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 7 P.W.: 2

| | | |
|---|---|---|
| ಹೆಸರು | : | ಲಕ್ಷ್ಮಣರಾವ್ |
| ತಂದೆಯ ಹೆಸರು | : | ವೆಂಕಟೇಶರಾವ್ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಏಣಗಿ ಬಸಾಪುರ ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಆರೋಪಿ ನಮ್ಮ ಊರಿನವನು, ನನಗೆ ಪರಿಚಯ ಇರುತ್ತಾನೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಆರೋಪಿತನ ಮೇಲೆ ಏನು ಪ್ರಕರಣ ನಡೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ನನಗೆ ಚಾಸಾ-1 ಮತ್ತು 9 ರವರ ಪರಿಚಯ ಮಾತ್ರ ಇರುತ್ತದೆ ಉಳಿದ ಸಾಕ್ಷಿದಾರರ ಪರಿಚಯ ನನಗೆ ಇರುವುದಿಲ್ಲ. ಆರೋಪಿತನು ನನ್ನ ಮೇಲೆ ಮತ್ತು ಚಾಸಾ-1 ರವರ ಮೇಲೆ ಯಾವುದೇ ರೀತಿ ಹಲ್ಲೆ ಮಾಡಿಲ್ಲ, ನಾನು ಆರೋಪಿ ಮತ್ತು ಚಾಸಾ-1 ರವರ ನಡುವೆಯಾದ ಜಗಳವನ್ನು ಯಾವುದೇ ರೀತಿಯಿಂದ ಬಿಡಿಸಿಲ್ಲ. ಯಾವುದೇ ಮು ಮಾಲುಗಳನ್ನು ನೋಡಿದರೆ ನನಗೆ ಗುರುತಿಸಲು ಆಗುವುದಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಮತ್ತು ನಾನು ಯಾವುದೇ ಆಸ್ಪತ್ರೆಯಲ್ಲಿ ಗಾಯದ ಕುರಿತು ಚಿಕಿತ್ಸೆಯನ್ನು ಪಡೆದಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿಃ 06-12-2013 ರಂದು ಮದ್ಯಾಹ್ನ 12 ಗಂಟೆ ಸಮಯದಲ್ಲಿ ನಾನು ಏಣಗಿಬಸಾಪುರ ಗ್ರಾಮದಲ್ಲಿಯ ಸುಬ್ಬಾರಾವ್ ರವರ ಮನೆಯ ಹತ್ತಿರ ಇದ್ದಾಗ ಚಾಸಾ-1 ರವರು ಚಾಸಾ-4 ರವರಿಗೆ ದಿಃ04-12-2013 ರಂದು ಮದ್ಯಾಹ್ನ 2 ಗಂಟೆ ಸಮಯದಲ್ಲಿ ಚುಡಾಯಿಸಿದ ವಿಚಾರವಾಗಿ ಹಾಗೂ ಚಾಸಾ-9 ರವರ 3 ತಿಂಗಳ ವೃದ್ಧಾಪ್ಯ ವೇತನ ಹಾಗೂ ಚಾಸಾ-10 ರಿಂದ 26 ರವರ ವೃದ್ಧಾಪ್ಯ ವೇತನಗಳನ್ನು ಆರೋಪಿ ನಿಗದಿತ ಸಮಯಕ್ಕೆ ಕೊಡದೇ ವಂಚನೆ ಮಾಡಿರುವುದರಿಂದ ಚಾಸಾ-1 ರವರ ಕೇಳಿದ್ದಕ್ಕೆ ಮದ್ಯಾಹ್ನ 12.30 ಗಂಟೆ ಸಮಯಕ್ಕೆ 1 ನೇ ಆರೋಪಿತನು ಚಾಸಾ-1

ರವರ ಜೊತೆ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದು, ಆತನನ್ನು ಅಡ್ಡಗಟ್ಟಿ ಕಲ್ಲಿನಿಂದ ಆತನ ಎಡಮೊಣಕೈಗೆ, ಕುತ್ತಿಗೆಗೆ, ಎಡಮೊಣಕಾಲಿಗೆ ಹೊಡೆದು ಗಾಯಪಡಿಸಿದ್ದು, ಜಗಳ ಬಿಡಿಸಿ ನಾನು ಚಾಸಾ-1 ರವರನ್ನು ನನ್ನ ವಾಹನದಲ್ಲಿ ಕರೆದುಕೊಂಡು ಆತನನ್ನು ಮನೆಗೆ ಬಿಟ್ಟು ಬರಲು ಹೋದಾಗ ಆರೋಪಿತನು ತನ್ನ ಮನೆಯ ಹತ್ತಿರ ಇದ್ದು ಮೇಲ್ಕಂಡ ಘಟನೆಯ ವಿಚಾರವಾಗಿ ಚಾಸಾ-1 ರವರಿಗೆ ಅವಾಚ್ಯವಾಗಿ ಬೈದು ನಮ್ಮನ್ನು ಅಡ್ಡಗಟ್ಟಿ ಕಲ್ಲುಗಳಿಂದ ಹೊಡೆದು ಪ್ರಾಣ ತೆಗೆಯುತ್ತೇನಂತಾ ಜೀವಬೆದರಿಕೆ ಹಾಕಿರುತ್ತಾನೆ, ನನಗೆ ಎಡತೊಡೆಗೆ ಹೊಡೆದು ರಕ್ತಗಾಯಪಡಿಸಿರುತ್ತಾನೆಂದರೆ ಸರಿಯಲ್ಲ. ಗಾಯಗೊಂಡ ನಾನು ಮತ್ತು ಚಾಸಾ-1 ರವರು ಸೇರಿ ತಂಬ್ರಹಳ್ಳಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆಂದರೆ ಸರಿಯಲ್ಲ. ಈ ಘಟನೆಯ ಕುರಿತು ನಾನು ದಿಃ 07-12-2013 ರಂದು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹಾ ಆರೋಪಿತನು ನಮ್ಮ ಗ್ರಾಮದವನಾಗಿರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ</u>

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ